# ಬಾಜಿ ಕಟ್ಟಿ ನೋಡು ಬಾರ ಮೀಸೆ ಮಾವ..





ಈಗ ಮೀಸೆ ಕೇವಲ ವೈಯಕ್ತಿಕ ಸ್ಟೈಲ್‌ನ ವಿಷಯವಾಗಿ ಉಳಿದಿಲ್ಲ. ವಿದೇಶಗಳಲ್ಲಿ ಆಕರ್ಷಕ ಮೀಸೆ ಸ್ಪರ್ಧೆಗಳು ಪ್ರತಿವರ್ಷವೂ ನಡೆಯುತ್ತವೆ!

■ ಮನೋರಮಾ ಹೆಜಮಾಡಿ






'ಮೀಸೆ' ಹೋಟೇಲ್, ಪಬ್, ಸಿನಿಮಾ ಮಂದಿರಗಳ ಗೇಟ್ ಬಳಿ ಪ್ರದರ್ಶನಕ್ಕಷ್ಟೇ ಸೀಮಿತವಾಗಿಲ್ಲ, ಅದೀಗ ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಗೂ ಇಳಿದಿದೆ. 'ಬಾಜಿ ಕಟ್ಟಿ ನೋಡು ಬಾರ ಮೀಸೆ ಮಾವ..' ಎಂದು ಮೀಸೆ ಯಜಮಾನರಿಗೆ ಸವಾಲೆಸೆಯುವ ಅಂತರರಾಷ್ಟ್ರೀಯ ಸ್ಪರ್ಧೆಗಳು ನಡೆಯುತ್ತವೆ. ಆಸ್ಟ್ರೇಲಿಯಾ, ಯೂರೋಪ್ ಮತ್ತು ಅಮೆರಿಕಾ ಮುಂತಾದ ಪಾಶ್ಚಿಮಾತ್ಯ ರಾಷ್ಟ್ರಗಳು ಮೀಸೆಗಳ ಸೃಜನಶೀಲ ಪ್ರದರ್ಶನಕ್ಕೆ ಯೋಗ್ಯ ವೇದಿಕೆ ನಿರ್ಮಿಸಿವೆ.

ನೀವು ಹುರಿ ಮೀಸೆ ಸರದಾರರೋ, ಇಲ್ಲ ಪೊದೆ ಮೀಸೆ ಮಾವಂದಿರೋ ಅಥವಾ ಇನ್ನೂ ಚಿಗುರುತ್ತಿರುವ ( ಚಿವುಟಲೂ ಸಿಗದ!) ಮೀಸೆಯನ್ನು ಪೊಗದಸ್ತಾಗಿ ಬೆಳೆಸುವ ಆಸೆ ಹೊತ್ತವರೋ..?!

ನೀವು ಯಾರೇ ಆಗಿರಲಿ, ನಿಮ್ಮ ಮೀಸೆಗೂ ಅಂತಾರಾಷ್ಟ್ರೀಯ ಮಟ್ಟದ ಖದರು ತಂದಕೊಳ್ಳಲು ಇಂಥ ಸುವರ್ಣಾವಕಾಶಗಳನ್ನು ಮಿಸ್ ಮಾಡಿಕೊಳ್ಳಬೇಡಿ.

ತರಾವರಿ ಮೀಸೆ!

ಕೇವಲ ಪಡ್ಡೆ ಹುಡುಗರ ಬೆರಳ ತುದಿಯ ಬೆಚ್ಚನೆಗೆ ತುತ್ತಾಗಿ ಚೂಪಾಗುವ ಮೀಸೆ ಹರೆಯದ ಹುಡುಗಿಯರಿಗೆ ಕಚಗುಳಿ ಇಡುತ್ತದೆ. ಅದೇ ಮೀಸೆ ಗಂಡಸರ ನಡುವಿನ ವಾಗ್ವಾದ ಜಗಳದಲ್ಲಿ ಪ್ರತಿಷ್ಠೆಯ ಪ್ರಶ್ನೆ (ಮೀಸೆಯ ಪ್ರಶ್ನೆ) ಯಾಗಿ ಪರಿಣಮಿಸುತ್ತದೆ. ಅಜ್ಜನ ತೊಡೆ ಏರಿ ಆಡುವ ಪುಟ್ಟ ಮಕ್ಕಳಿಗೆ ಗಡ್ಡ /ಮೀಸೆಯೊದು ಚುಚ್ಚುವ ಆಟಿಕೆ!

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮೀಸೆ ಬರಿಯ ಪ್ರತಿಷ್ಠೆಯ ವಸ್ತುವಾಗಿ ಉಳಿದಿಲ್ಲ. ಸೃಜನಶೀಲ ಮೀಸೆಗಳನ್ನು, ಅವುಗಳ ಅಂದ ಚೆಂದವನ್ನು ಅಳೆದು, ಸುರಿದು, ಆನಂದ ಪಡುವುದಕ್ಕಾಗಿ ಮೀಸೆ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದೆ. ಸ್ಪರ್ಧೆಗಳಲ್ಲಿ ಯಾರ ಸೋಲುಗೆಲುವು ಎನ್ನುವುದು ಒತ್ತಟ್ಟಿಗಿರಲಿ. ಆ ನೆಪದಲ್ಲಿ ಪ್ರಪಂಚದ ಮೂಲೆಮೂಲೆಗಳಿಂದ ಬರುವ